

# ಆರ್ಟೆಮಿಸ್ 2

## ಮತ್ತೆ ಚಂದ್ರನತ್ತ ಮಾನವ!

**ನಾಲ್ಕು ಜನ ಗಗನಯಾನಿಗಳು ಚಂದ್ರನನ್ನು ಭಾಗಶಃ ಸುತ್ತಿ, 'ಆರ್ಟೆಮಿಸ್ 2' ಸಾಹಸಯಾನ ಮಾಡಿ ಭೂಮಿಗೆ ಸುರಕ್ಷಿತವಾಗಿ ಮರಳಿ ಬಂದಿದ್ದಾರೆ. 'ಮಾನವರನ್ನು ಪುನಃ ಚಂದ್ರನಲ್ಲಿಗೆ ಕೊಂಡೊಯ್ಯುವ ಸಲುವಾಗಿ' ಸಹಮನಸ್ಕ ರಾಷ್ಟ್ರಗಳ ಜೊತೆಗೂಡಿ ಅಮೆರಿಕ ಹಾಕಿಕೊಂಡಿರುವ ಈ ಕಾರ್ಯಕ್ರಮ ಯಶ ಕಂಡಿದೆ. ನಭದಲ್ಲಿ ಸಾಗಿದ ಸಾಹಸ ಮಾಡಿದ ಗಗನಯಾನಿಗಳ ಕುರಿತ ಈ ವಿಶೇಷ ಬರಹ 'ಸುಧಾ' ಓದುಗರಿಗಾಗಿ...**

■ ಡಾ. ಬಿ.ಆರ್. ಗುರುಪ್ರಸಾದ್

ಚಿತ್ರ ಕೃಪೆ ನಾಸಾ

'ಇದುವರೆಗೂ ಮಾನವರು ತೆರಳಿರದಿದ್ದಷ್ಟು ದೂರಕ್ಕೆ ಅಂತರಿಕ್ಷದಲ್ಲಿ ಸಾಗುವ ಸಾಹಸ', 'ಐದು ದಶಕಗಳ ನಂತರ ಮತ್ತೆ ಚಂದ್ರನತ್ತ ಮಾನವನ ಪಯಣ', 'ಚಂದ್ರನತ್ತ ಮೊದಲ ಮಹಿಳೆ' 'ಚಂದ್ರನತ್ತ ಮೊದಲ ವರ್ಣದ (ಅಂದರೆ 'ಬಿಳಿಯ' ಯೂರೋಪಿಯನ್ ಸಂಜಾತನಲ್ಲದ) ಅಮೆರಿಕನ್' ಹೀಗೆ 'ಆರ್ಟೆಮಿಸ್ 2' ಎಂಬ ಸಾಹಸಯಾನದ ಬಗ್ಗೆ ಜಗತ್ತಿನ ಖ್ಯಾತ ಮಾಧ್ಯಮಗಳು ಇತ್ತೀಚೆಗೆ ಆಕರ್ಷಕವಾಗಿ ಸಾರಿದ್ದವು. ಸ್ವಲ್ಪ ತಡವಾಗಿಯಾದರೂ ಈ ಏಪ್ರಿಲ್ 1 ರಂದು 'ಆರ್ಟೆಮಿಸ್ 2'ರ ಆರಂಭ 32 ಮಹಡಿಗಳಷ್ಟು ಎತ್ತರದ 'ಎಸ್‌ಎಲ್‌ಎಸ್' ಎಂಬ ದೈತ್ಯ ರಾಕೆಟ್‌ನಲ್ಲಿ 'ಅದ್ಭುತ' ಎಂದು ಉದ್ಗರಿಸುವಂತೆ ಜರುಗಿದೆ. 'ಆರ್ಟೆಮಿಸ್ 2' ಅಭಿಯಾನದ 'ಒರೆಯಾನ್' ನೌಕೆಯಲ್ಲಿ ನಾಲ್ಕು ಜನ ಗಗನಯಾತ್ರಿಗಳು ಚಂದ್ರನನ್ನು ಭಾಗಶಃ ಸುತ್ತಿ ಶರವೇಗದಲ್ಲಿ ಭೂಮಿಗೆ ಸುರಕ್ಷಿತವಾಗಿ ಮರಳಿ ಬಂದಿದ್ದಾರೆ.

ಈ 'ಆರ್ಟೆಮಿಸ್ 2' ಎಂಬ ಯಾನದ ವಿಶೇಷವೇನು? ಇದಕ್ಕೇಕೆ ಇಷ್ಟು ಪ್ರಾಮುಖ್ಯ?

### ಆರ್ಟೆಮಿಸ್‌ನ ಮಹತ್ವ

'ಆರ್ಟೆಮಿಸ್' ಎಂಬುದು 'ಮಾನವರನ್ನು ಪುನಃ ಚಂದ್ರನಲ್ಲಿಗೆ ಕೊಂಡೊಯ್ಯುವ ಸಲುವಾಗಿ' ತನ್ನ ಸಹಮನಸ್ಕ ರಾಷ್ಟ್ರಗಳ ಜೊತೆಗೂಡಿ ಅಮೆರಿಕ ಹಾಕಿಕೊಂಡಿರುವ ಕಾರ್ಯಕ್ರಮ. ಆದರೆ ಅದಷ್ಟೇ ಆರ್ಟೆಮಿಸ್ ಕಾರ್ಯಕ್ರಮದ ಉದ್ದೇಶವಾಗಿಲ್ಲ. ಮಾನವರು ಚಂದ್ರನ ಮೇಲೆ ಸುಸ್ಥಿರವಾಗಿ ವಾಸ ಮಾಡುವಂತೆ ಮಾಡುವುದು (ಅಂದರೆ ಕೇವಲ ಕೆಲದಿನಗಳಲ್ಲ, ನಿರಂತರವಾಗಿ ಅಲ್ಲಿ ವಾಸಿಸುವುದನ್ನು ಸಾಧ್ಯಮಾಡುವುದು) ಆ ಕಾರ್ಯಕ್ರಮದ ಮತ್ತೊಂದು ಉದ್ದೇಶವಾಗಿದೆ. ಆ ಮೂಲಕ ಚಂದ್ರನನ್ನು ಮತ್ತಷ್ಟು ವಿವರವಾಗಿ ಅನ್ವೇಷಿಸುವುದು, ಅಲ್ಲಿನ ಸಂಪನ್ಮೂಲಗಳನ್ನು ಮತ್ತಷ್ಟು ನಿಖರವಾಗಿ ಮಾಪನ ಮಾಡುವುದು (ಸರ್ವೇ), ಅಲ್ಲಿನ ಸಂಪನ್ಮೂಲಗಳನ್ನು ಆ ನಂತರ ಬಳಸಿಕೊಳ್ಳುವುದು ಮತ್ತು 'ಚಂದ್ರನ ಮೂಲಕ' ಮಂಗಳಗ್ರಹಕ್ಕೆ ಮಾನವ ತೆರಳುವ ಪ್ರಯತ್ನವನ್ನು ಮಾಡುವುದು, ಈ ಎಲ್ಲವನ್ನೂ ಆರ್ಟೆಮಿಸ್ ಕಾರ್ಯಕ್ರಮದ ಮೂಲಕ ಸಾಧಿಸಲು ಉದ್ದೇಶಿಸಲಾಗಿದೆ.

ಆರ್ಟೆಮಿಸ್ ಕಾರ್ಯಕ್ರಮದ ಮೊದಲ ಯಾನವಾದ 'ಆರ್ಟೆಮಿಸ್ 1'ರಲ್ಲಿ ಗಗನಯಾತ್ರಿಗಳನ್ನು ಚಂದ್ರನತ್ತ ಉಡಾಯಿಸುವುದಕ್ಕೆ ಮೊದಲು ಆ ಕಾರ್ಯಕ್ರಮದ ನೌಕೆ 'ಒರೆಯಾನ್' ಮಾನವರಿಲ್ಲದೆಯೇ ಸುರಕ್ಷಿತವಾಗಿ ಕಾರ್ಯನಿರ್ವಹಿಸುವುದನ್ನು ಖಾತ್ರಿಪಡಿಸಿಕೊಳ್ಳಲಾಯಿತು.

ಅದರ ನಂತರದ ತಾರ್ಕಿಕ ಹಂತವೇ ಈ ಏಪ್ರಿಲ್ 1ರಂದು ಆರಂಭವಾದ 'ಆರ್ಟೆಮಿಸ್ 2'. ಈ ಅಭಿಯಾನದಲ್ಲಿ (ಮಿಷನ್) 'ಎಸ್‌ಎಲ್‌ಎಸ್' ರಾಕೆಟ್ ಹೆಗಲೇರಿದ 'ಒರೆಯಾನ್' ನೌಕೆಯಲ್ಲಿ ಹೊರಟ ನಾಲ್ವರು ಗಗನಯಾತ್ರಿಗಳು ಭೂಮಿಯನ್ನು ಕೆಲಕಾಲ